

# ಅಂದಕ್ಕೆ ರಂಗಿನ ಮದರಂಗಿ

ಸೌಂದರ್ಯಕ್ಕೂ ಆರೋಗ್ಯಕ್ಕೂ ಬಹಳ ಉಪಯುಕ್ತವಾದ ಮದರಂಗಿ ಗಿಡ ಸಂಪ್ರದಾಯಕ್ಕೂ ಬೇಕು, ಅಂದ–ಚಂದದ ನಿರ್ವಹಣೆಗೂ ಸಹಕಾರಿ. ಮದರಂಗಿ ಮದುವೆ ಹೆಣ್ಣಿಗೆ ಅಗತ್ಯವಾಗಿ ಬೇಕಾದ ಸಾಧನ ಕೂಡ ಹೌದು.

■ ಕೆ.ಬಿ.ಭರತ್‌ರಾಜ್ ಶೃಂಗೇರಿ

ಅಂಗೈಗೆ ಹಚ್ಚಿಕೊಳ್ಳುವ ಮದರಂಗಿ ಸಾಂಪ್ರದಾಯಿಕತೆಯ ಸಂಕೇತವಾದರೂ ಅದೀಗ ಫ್ಯಾಷನ್ ಕೂಡ ಆಗಿದೆ. ಮದುವೆ ಹೆಣ್ಣಿಗೆ ಮದರಂಗಿ ಬೇಕೇ ಬೇಕು. ಈಗ ಹಬ್ಬ ಹರಿದಿನಗಳಿಗೂ ಮದರಂಗಿ ಹಚ್ಚಿಕೊಳ್ಳುವುದಿದೆ. ಸಣ್ಣ ಹುಡುಗಿಯರಿಂದ ಹಿಡಿದು ಮಹಿಳೆಯವರೆಗೆ ಎಲ್ಲರೂ ಮದರಂಗಿ ಹಚ್ಚಿಕೊಳ್ಳುವುದನ್ನು ಇಷ್ಟಪಡುತ್ತಾರೆ. ಮದರಂಗಿ ಎಲೆಯನ್ನು ಬಳಸಿ ರಂಗು ರಂಗಿನ ಚಿತ್ತಾರವನ್ನು ಅಂಗೈ ಮೇಲೆ ಹಚ್ಚಿಕೊಳ್ಳುವುದು ಹಿಂದಿನಿಂದಲೂ ಬೆಳೆದು ಬಂದಿದೆ.

ಇದೀಗ ಕೋನ್ ಮದರಂಗಿ ಹೆಚ್ಚು ಜನಪ್ರಿಯ. ಮದುವೆ ಸಮಾರಂಭ ಮಾತ್ರವಲ್ಲದೆ ಮಾಮೂಲಿ ದಿನಗಳಲ್ಲೂ ಮದರಂಗಿ ಹಾಕಿಕೊಳ್ಳುವುದು ಈಗ ಟ್ರೆಂಡ್ ಆಗಿದೆ. ಮದುವೆ ದಿನ ವಧುವಿಗೆ ಮಾಡುವ 'ಸಪ್ತ ಶೃಂಗಾರ'ಗಳಲ್ಲಿ ಮದರಂಗಿಗೂ ಸ್ಥಾನವಿದೆ.

ಮದರಂಗಿ ಗಿಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಹೆಣ್ಣುಮಕ್ಕಳ ಮನಸ್ಸನ್ನು ಗೆದ್ದಿರುವ ಗಿಡವೇ ಮದರಂಗಿ ಗಿಡ. ಇದು ಅಲಂಕಾರಕ್ಕಾಗಿ ಮಾತ್ರವಲ್ಲದೇ ಆರೋಗ್ಯಕ್ಕೂ ಪ್ರಯೋಜನಕಾರಿ.

